(ಇಂದು ದಿನಾಂಕ:17-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನಾನು ಮತ್ತು ನನ್ನ ವಕೀಲರು ದಾಖಲೆಗಳನ್ನು ಪರೀಶೀಲಿಸಿದ ನಂತರವೇ ನ್ಯಾಯಾಲಯಕ್ಕೆ ಅವುಗಳನ್ನು ಸಲ್ಲಿಸಿದ್ದೇನೆ. ಜೈರಾ ಖಾತುಂಬಿ 12 ಎಕರೆ 8 ಗುಂಟೆ ಜಮೀನಿನ ಮಾಲೀಕಳು ಮತ್ತು ಕಬ್ಜಾದಾರಳು ಇದ್ದರು ಎಂದರೆ ಸರಿ. ಜೈರಾ ಖಾತುಂಬಿ ರವರು ಯಾರು ಯಾರಿಗೆ ಎಷ್ಟು ಎಷ್ಟು ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಎನ್ನುವ ಬಗ್ಗೆ ನಾನು ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

2. ಮೃತ ಜೈರಾ ಖಾತುಂಬಿ ರವರು 19 ಎಕರೆ 29 ಗುಂಟೆ ಜಮೀನು ಮಾರಾಟ ಮಾಡಿದ ಬಗ್ಗೆ ನಾನು ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆಧಾರಿಸಿದಂತೆ ಮೃತ ಜೈರಾ ಖಾತುಂಬಿರವರು ಖರೀದಿ ಪತ್ರ ಸಂಖ್ಯೆ 712/1999-2000 ದಿಃ 02-06-1999 ಇದು ಖರೀದಿ ಕರಾರು ಪತ್ರ ಇರುತ್ತದೆ, ಖರೀದಿ ಪತ್ರ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಯನ್ನು ಒಂದು ದಾಖಲೆಯನ್ನು ತೋರಿಸಲಾಗಿ ಅದು ಖರೀದಿ ಕರಾರು ಪತ್ರ ಇರುತ್ತದೆ ಅಂತಾ ಒಪ್ಪಿಕೊಂಡಿರುತ್ತಾರೆ, ಸದರಿ ದಾಖಲೆಯನ್ನು **ನಿಡಿ-2** ಎಂದು ಗುರುತಿಸಲಾಯಿತು. ಮ್ಯೂಟೇಶನ್‌ನಲ್ಲಿ ಖರೀದಿ ಅಂತಾ ನಮೂದು ಮಾಡಲಾಗಿದೆ ಅದೇ ಕಾರಣಕ್ಕಾಗಿ ನಿಡಿ-2 ದಾಖಲೆಯನ್ನು ಖರೀದಿ ಪತ್ರ ಅಂತಾ ನಾನು ಮ್ಯೂಟೇಶನ್ ಆಧರಿಸಿ ಹೇಳಿದ್ದೇನೆ. ಈಗ ಸಾಕ್ಷಿಗೆ ಮ್ಯೂಟೇಶನ್ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಖರೀದಿ ಕರಾರು ಪತ್ರ ಅಂತಾ ನಮೂದು ಮಾಡಲಾಗಿದೆ ಅಂತಾ ಒಪ್ಪಿಕೊಳ್ಳುತ್ತಾರೆ. ನಾನು ಸಲ್ಲಿಸಿದ ಮ್ಯೂಟೇಶನ್ ನಿಪಿ-13 ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಕೂಡಾ ಖರೀದಿ ಕರಾರು ಪತ್ರ ಅಂತಾ ನಮೂದು ಮಾಡಲಾಗಿದೆ ಅಂತಾ ಸಾಕ್ಷಿ ಒಪ್ಪಿಕೊಳ್ಳುತ್ತಾರೆ.

3. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರವನ್ನು ನೋಂದಾಯಿತ ರದ್ದತಿ ಪತ್ರದ ಮುಖಾಂತರ ರದ್ದು ಮಾಡಲಾಗಿದೆ ಎಂದರೆ, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸದರಿ ವಿಷಯವನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇವೆ ಎಂದರೆ ಸರಿ. ನಾನು ಖರೀದಿ ಪತ್ರ ಸಂಖ್ಯೆ 5341/2001-02 ನೇದ್ದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ-9 ಮ್ಯೂಟೇಶನ್ ಖರೀದಿ ಕರಾರು ಪತ್ರ ರದ್ದು ಆದ ಬಗ್ಗೆ ಇದ್ದು, ಆದರೆ ಉದ್ದೇಶಪೂರ್ವಕವಾಗಿ ನಾನು ಖರೀದಿ ಪತ್ರದ ಆಧಾರದ ಮೇಲೆ ಮ್ಯೂಟೇಶನ್ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಖರೀದಿ ಕರಾರು ಪತ್ರ ರದ್ದಾದ ಬಗ್ಗೆ ನೊಂದಣಿ ದಾಖಲೆ ಸಂಖ್ಯೆ 2341/2001-02 ಇದೆ ಎಂದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಖರೀದಿ ಕರಾರು ಪತ್ರ ರದ್ದಾದ ಬಗ್ಗೆ ನೊಂದಣಿ ದಾಖಲೆ ಸಂಖ್ಯೆ 2341/2001-02 ಇದೆ ಅಂತಾ ಒಪ್ಪಿಕೊಳ್ಳುತ್ತಾರೆ ಕಾರಣ ಸದರಿ ದಾಖಲೆಯನ್ನು **ನಿಡಿ-3** ಎಂದು ಗುರುತಿಸಲಾಯಿತು.

5. ಮೃತ ಜೈರಾ ಖಾತುಂಬಿ ರವರು ಖರೀದಿ ಪತ್ರ ಸಂಖ್ಯೆ 711/1999-2000 ದಿಃ 02-06-1999 ಮುಖಾಂತರ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಜೈರಾ ಖಾತುಂಬಿ ರವರು ಖರೀದಿ ಪತ್ರ ಸಂಖ್ಯೆ 711/1999-2000 ದಿಃ 02-06-1999 ಮುಖಾಂತರ ಕೇವಲ 2 ಎಕರೆ ಜಮೀನನ್ನು ಮಾತ್ರ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದರ ಬಗ್ಗೆ ಪೋಟ ಖರಾಬ 1 ಎಕರೆ ಅಂತಾ ದಾಖಲೆಯಲ್ಲಿ ನಮೂದು ಇದೆ ಅಂತಾ ಸಾಕ್ಷಿ ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಜೈರಾ ಖಾತುಂಬಿರವರು ಸಂಪೂರ್ಣ 5 ಎಕರೆ ಜಮೀನನ್ನು ಸಿದ್ದಲಿಂಗರವರ ಪರವಾಗಿ ಖರೀದಿ ಪತ್ರ ಸಂಖ್ಯೆ 711/1999-2000 ದಿಃ 02-06-1999 ಮುಖಾಂತರ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಅದೇರೀತಿ ಮ್ಯೂಟೇಶನ್ ಸಂಖ್ಯೆ 4 ಕೂಡಾ ಅಮಲು ಮಾಡಲಾಗಿದೆ ಅಂತಾ ನಾನು ಹೇಳಿರುತ್ತೇನೆ ಎಂದರೆ ಸರಿ. ಮ್ಯೂಟೇಶನ್ ನಿಪಿ-8 ನಾನೇ ಸಲ್ಲಿಸಿರುತ್ತೇನೆ. ಅದರಲ್ಲಿಯೂ ಕೂಡಾ 5 ಎಕರೆ ಬರೆದಿಲ್ಲ, 2 ಎಕರೆ ಅಂತಾ ಬರೆಯಲಾಗಿದೆ ಎಂದರೆ ಸರಿ.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರ